

ನೋಡಿ ಶೇಕ್ರಗ ಕಾಲ್ ಮಾಡಾಕ ಮುಂದಾದ. ಯಾಕೇನು ಶೇಕ್ರಂದು, ಪಿಂಜಿದು ಮೊಬೈಲ್ ಬ್ಯುಸಿ ಬರತೊಡಗಿತ್ತು. ರಾಗಪ್ಪ ಮತ್ತಷ್ಟು ಸಿಟ್ಟುಗೊಂಡು ಮನೆತುಂಬಾ ಓಡಾಡತೊಡಗಿದ.

ಮೊದ್ಲೆ ರಾಗಪ್ಪ ಊರಿಗೆ ಮಿಕ್ಕಿದವ ಮತ್ತು ಬಾಯಿ ರುಚಿಗಾರ. ಊರಾಗ ಯಾರ್ ಜತೆನೂ ನೆಟ್ಟಗ ಇರ್ತಿರಲಿಲ್ಲ. ಮನ್ಯಾಗ, ಹೊಲ್ದಾಗ ತಂದೇನು, ತಾನೇನು ಅನ್ನುವಂಗಿದ್ದ. ಊರಾಗ ಒಂದಿಬ್ರು ಜತೆ ಮಾತ್ರ ಬೇಸು ಇರುತ್ತಿದ್ದ. ಯಾರಂದ್ರ ಊರ್‌ಸುದ್ದಿ, ಕಳ್‌ಸುದ್ದಿ ಬಂದ್‌ಬಂದು ಹೇಳುತ್ತಿದ್ದ ಗರ್ರಪ್ಪ, ಇನ್ನೊಬ್ಬ ಮೊಲದ ಬ್ಯಾಟಿ, ಉಡದ ಬ್ಯಾಟೆಂತ ತಂದು ಕೊಡುತಿದ್ದ ಪಕ್ಕದ ಮನಿ ಕಳ್‌ದ್ಯಾವ. ಇವ್ರಿಬ್ಬರ ಜತಿಗೆ ಮಾತ್ರ ಇರುತ್ತಿದ್ದ. ರಾಗಪ್ಪಗ ಇವರಿಂದ ದಿನ ಬೇಸಾ ಆಸ್ರ ಆಗುತ್ತಿತ್ತು. ಈಗ ಬೆಳ್ಳಂಬೆಳಿಗ್ಗೆ ಗರ್ರಪ್ಪನಿಂದ ಇಂಥ ಸುದ್ದಿಕೇಳ್ಳಿ, ರಾಗಪ್ಪಗ ತಲಿ ಕೆಟ್ಟಂಗಾಗಿ ಫೋನ್ ಮಾಡಾಕ ಮುಂದಾದ.